ಶ್ರೀ ಎನ್. ಯೋಗೀಶ್ ಭಟ್ : ಮಳೆಗಾಲ ಪ್ರಾರಂಭವಾಗುವ ಮುಂಚೆ ಮೀನುಗಾರಿಕೆ ಸಚಿವರು ಮುಂಜಾಗ್ರತಾ ಕ್ರಮವಾಗಿ ಕಾಮಗಾರಿಗಳನ್ನು ಮುಗಿಸಬೇಕಾಗಿದ್ದು ಒಂದು ಆದೇಶವನ್ನು ಕೊಡಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮೀನುಗಾರಿಕೆ ಸಚಿವರು) : ಅಧ್ಯಕ್ಷರೆ, ಸಂಬಂಧಪಟ್ಟ ಕಡತ ಬಂದಿದೆ, ಅದಕ್ಕೆ ಮುಂದಿನವಾರ ಉತ್ತರವನ್ನು ಕೊಡುತ್ತೇನೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಲಿಖಿತ ಮೂಲಕ ಉತ್ತರಿಸುವ 20ನೇ ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 65 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಹಿರೇಕೆರೂರ ತಾಲ್ಲೂಕ ಚಿಕ್ಕೇರೂರನಲ್ಲಿ ಸಬ್ ಸ್ಟೇಷನ್ ಸ್ಥಾಪನೆ.

1220 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿರೇಕೆರೂರು ತಾಲ್ಲೂಕು ಚಿಕ್ಕೇರೂರು ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ವಿದ್ಯುತ್ ಸಮಸ್ಯೆಯಿಂದ 15 ರೈಸ್ ಮಿಲ್‌ಗಳು, 10 ಸಾಮಿಲ್‌ಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಿರೇಕೆರೂರು ತಾಲ್ಲೂಕಿನಲ್ಲಿ ಅತಿ ಹೆಚ್ಚು ರೆವಿನ್ಯೂ ಕೊಡುವ ಗ್ರಾಮವಾಗಿದ್ದರಿಂದ ಈ ಸಮಸ್ಯೆ ಹೋಗಲಾಡಿಸಲು33 : 11 ಕೆವಿ ಸಬ್‌ಸ್ಟೇಷನ್ ಮಂಜೂರು ಮಾಡುವ ಕೆಲಸ ಈಗ ಯಾವ ಹಂತದಲ್ಲಿದೆ?*

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಲಾಗುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್‌ನಂತೆ ಹಿರೇಕೆರೂರು ತಾಲ್ಲೂಕಿನ ಚಿಕ್ಕೇರೂರ ಪ್ರದೇಶಕ್ಕೂ ಲೋಡ್ ಷೆಡ್ಡಿಂಗನ್ನು ಜಾರಿಗೊಳಿಸಲಾಗಿದೆ. ಈ ಪ್ರದೇಶಕ್ಕೆ ಪ್ರತಿದಿನ 10 ಘಂಟೆಗಳ ಅವಧಿಗೆ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದೆ. 8 ಘಂಟೆಗಳ ಅವಧಿಗೆ ಸಿಂಗಲ್ ಫೇಸ್ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದ್ದು, ಉಳಿದ6 ಘಂಟೆಗಳ ಅವಧಿಗೆ ನಿಯಮಿತ ಲೋಡ್ ಷೆಡ್ಡಿಂಗನ್ನು ನಿರ್ವಹಿಸಲಾಗುತ್ತಿದೆ.

ಈ ಮೊದಲು ಚಿಕ್ಕೇರೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಡಿಮೆ ವೋಲ್ಟೇಜ್ ಸಮಸ್ಯೆ ಇದ್ದಿತ್ತು. ಇತ್ತೀಚೆಗೆ ರಾಣೆಬೆನ್ನೂರಿನಲ್ಲಿ220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಚಾಲನೆಗೆಳಿಸಲಾಗಿದ್ದು, ಇದರಿಂದ ಸದರೀ ಪ್ರದೇಶದಲ್ಲಿ ಈಗ ವಿದ್ಯುತ್ ವೋಲ್ಟೇಜ್‌ನಲ್ಲಿ ಸುಧಾರಣೆ ಆಗಿದೆ.